ಶ್ರೀ ಜಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ. ಇದು ಕೇವಲ ಶಿಕಾರಿಪುರ ತಾಲ್ಲೂಕಿಗೆ ಅಲ್ಲ, ಇಡೀ ರಾಜ್ಯದಲ್ಲಿ ಗ್ರಾಮಾಂತರ ಪ್ರದೆಶದಲ್ಲಿ ವಿದ್ಯುತ್ ಸರಬರಾಜಿಗಾಗಿ ಆಯಾ ಮಂಡಲಗಳಿಂದ ಸಾಮಾನ್ಯವಾಗಿ ದುಡ್ಡು ಕಟ್ಟಿಲ್ಲ ಹರಿಜನರ ಕಾಲೋನಿಯಲ್ಲಿ ನಿರಡು ಕಂಬ ಸಾಕಬೇಕು, ವಿದ್ಯುತ್ ವ್ಯವಸ್ಥೆ ಮಾಡಿಕೊಡಬೇಕು ಎಂದು ಕೇಳಿದರೆ ಅಧಿಕಾರಿಗಳು ದುಡ್ಡು ಕಟ್ಟಿಲ್ಲದೇ ಇರುವುದರಿಂದ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಲಿಖಿತವಾಗಿ ತಾಲ್ಲೂಕು ಪಂಚಾಯಿತಿಗಳು ಉತ್ತರ ಕೊಡುತ್ತಿದ್ದಾರೆ. ಸರ್ಕಾರದಿಂದ ಏನಾದರೂ ಎಲ್ಲಿಲ್ಲಿ ಮಂಡಲ ಪಂಚಾಯಿತಿಗಳು ಹಣ ಪಾವತಿ ಮಾಡಿಲ್ಲ ಅಂತಹ ಕಡೆ ಯಾವುದೇ ಕೆಲಸ ಕಾರ್ಯಗಳನ್ನು ಮಾಡಬಾರದು ಎಂದು ಆದೇಶ ಹೋಗಿದೆಯೇ. ಏಕೆ ಆ ರೀತಿ ನಿಮ್ಮ ಅಧಿಕಾರಿಗಳು ಹೇಳುತ್ತಾ ಇದ್ದಾರೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಹಿ-ಹಿ-ಗಿರಿಲೆ ರಿಂದೀಚೆಗೆ ಕೊಡಬೇಕಾದಂಥ ಬಾಕಿಯನ್ನು ಗಣನೆಗೆ ತೆಗೆದುಕೊಳ್ಳದೆ ಅಲ್ಲಿಂದೀಚೆಗೆ ಕೊಡಬೇಕಾದಂಥ ಬಾಕಿಗಳನ್ನು ಕಟ್ಟಿದರೆ ಮಾತ್ರ ಅವರಿಗೆ ಸರಬರಾಜು ಮಾಡಬೇಕು. ಇದರಿಂದ ಹೊಂದರೆ ಜನರಲ್ಲಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು ಎಂಬ ಸೂಚನೆ ಬೋಗಿದೆ. ಏಕೆಂದರೆ ಪ್ರವರ್ಭಗಳು ಮತ್ತು ಪಂಚಾಯಿತಿಗಳಿಂದ ಹಿಂದಿನ ಬಾಕಿ ಕುಂಬ ನಿಂತಿದೆ ಮಂಡಲ ಪಂಚಾಯಿತಿಗಳು ಬಾಗುವುದಕ್ಕೆ ಮುಂಚೆ ಇವು ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಇದ್ದಂಥ ಬಾಕಿಯನ್ನು ಒತ್ತಾಯ ಮಾಡುತ್ತಾ ಇಲ್ಲ. ಅಲ್ಲಿಂದೀಚೆಗೆ ಕೊಡಬೇಕಾದದು ಅವರ ಕರ್ತವ್ಯ ಎಂದು ಭಾವನೆ ಮಾಡಿ ಬಾಕಿ ನಿಲ್ಲುತ್ತಾ ಹೋಗುತ್ತಿದೆ. ಅದನ್ನು ಕೊಡದೇಹೋದರೆ ಮಂಡಳಿಗೆ ಕಷ್ಟವಾಗುತ್ತದೆ ಎನ್ನುವ ದೃಷ್ಟಿಯಿಂದ ಸಡಿಲಿಸಿ ಹೋಗಿದೆ.

ಶ್ರೀ ಜಿ. ಎಸ್. ಯಡಿಯೂರಪ್ಪ.—ಮಂಡಲ ಪಂಚಾಯಿತಿಯಲ್ಲಿ ಪ್ರಗತಿಪರ ಕೆಲಸಗಳಿಗೆ ದುಡ್ಡಿಲ್ಲದೇ ಇರುವಾಗ, ಪ್ರಧಾನರಿಗೆ ಸದಸ್ಯರಿಗೆ ಸಂಬಳಕ್ಕೆ ದುಡ್ಡಿಲ್ಲದೇ ಇರುವ ಸಂದರ್ಭದಲ್ಲಿ ಮಂಡಲಪಂಚಾಯಿತಿಗಳು ವಿದ್ಯುತ್ ಸರಬರಾಜಿಗಾಗಿ ದುಡ್ಡನ್ನು ಕಟ್ಟುತ್ತವೆ ಎಂದು ಯಾವರೀತಿ ನೀವು ಅಪೇಕ್ಷೆ ಪಡುತ್ತೀರಾ ಇನ್ನೊಂದು ರೂಪದಲ್ಲಿ ಕೊಡುವುದಕ್ಕೆ ಆಭ್ಯಂತರವಿಲ್ಲ. ಮಂಡಲ ಪಂಚಾಯಿತಿಗಳ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ. ಆದುದರಿಂದ ಮಂಡಲ ಪಂಚಾಯಿತಿಗಳ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅವುಗಳ ಹಣಕಾಸಿನ ಪರಿಸ್ಥಿತಿ ಸುಧಾರಣೆಯಾಗುವವರೆಗೆ ಕಾರ್ಯಾಚರಣೆಯನ್ನು ಸಡಿಲ ಮಾಡಿ ಅಗತ್ಯವಿರುವಂಥ ಕೆಲಸಕಾರ್ಯಗಳಿಗೆ ಆದೇಶ ಕೊಡುತ್ತೀರಾ?

೨-೩೦ ಪಿ. ಎಂ.

ಎಡಚನೆಯದಾಗಿ ಗಾಂಧಿನಗರ ಏನ್ನುವ ಒಂದು ತಾಂಡಾವಿದ್ದು ಅಲ್ಲಿ ಲಂಬಾಣಿ. ಹರಿಜನರೇ ಹೆಚ್ಚು ವಾಸವಾಗಿದ್ದಾರೆ. ಕಳೆದ ೪-೫ ವರ್ಷಗಳಿಂದ ಅಲ್ಲಿನ ಜನರು ಕತ್ತಲಲ್ಲಿಯೇ ಇದ್ದಾರೆ. ಆದ್ದರಿಂದ ಇನ್ನೂ ೮-೧೦ ಕಂಬಗಳನ್ನು ಬಾಕಿ ತಕ್ಷಣ ವಿದ್ಯುತ್ ಒದಗಿಸಿಕೊಡುವುದಕ್ಕೆ ಆದೇಶ ಕೊಡುತ್ತೀರಾ

ಶ್ರೀ ಲಕ್ಷ್ಮೀನರಸಿಂಹಯ್ಯ.—ಜುಲೈ ತಿಂಗಳೊಳಗಾಗಿ ಖಂಡಿತವಾಗಿ ಮುಗಿಸಿ ಕೊಡುತ್ತೇನೆ. ಬೇರೆ ಬೇರೆ ಮಂಡಲಪಂಚಾಯಿತಿಗಳು ಸಾಲ ಕಟ್ಟುವಲ್ಲಿರುವಾಗ ಕೆಲವು ಮಂಡಲ ಪಂಚಾಯಿತಿಗಳು ಮಾತ್ರ ಬಾಕಿ ಉಳಿಸಿಕೊಂಡಿವೆ. ವಿದ್ಯುತ್ ಮಂಡಲಿಗೆ ಆರ್ಥಿಕವಾಗಿ ಹಣ ಬೇಕಾಗಿದೆ. ಆ ದೃಷ್ಟಿಯಿಂದ ಕನೆಸೆಷನ್ ಕೊಟ್ಟುಕೊಂಡು ಹೋಗುವ ನಮ್ಮ ಮಂಡಲಿಗೆ ಹಣ ಬರುವುದಿಲ್ಲ. ಹಣ ಕಟ್ಟುವುದಕ್ಕೆ ಮಂಡಲ ಪಂಚಾಯಿತಿಗಳು ಪ್ರಯತ್ನ ಮಾಡುತ್ತಾ ಹೋಗುವುದು. ಒಳ್ಳೆಯದು ಆದ್ದರಿಂದ ಇದನ್ನು ವಿಶೇಷವಾಗಿ ಪರಿಗಣಿಸುವುದಕ್ಕೆ ಕಷ್ಟವಾಗುತ್ತದೆ.

ಪ್ರಶ್ನೆ ಸಂಖ್ಯೆ ೫೦೩ (೧೯೦೭) ಸದಸ್ಯರು ಗೈರು ಹಾಜರಿ

ಶಹಾಪುರ ಮತ್ತು ಸುರಪುರ ತಾಲ್ಲೂಕಿನ ತಾಂಡಾಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ

೧೮೪೯. ಶ್ರೀ ಶಿವಶೇಖರಪ್ಪಗೌಡ ಶರಮಾಳ (ಶಹಪುರ).—ಮಾನ್ಯ ವಿದ್ಯುತ್ ಹಾಗೂ ಹಾಗೂ ಕೋಟಿಗಾರಿಕೆ, ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಗುಲ್ಬರ್ಗಾ ಜಿಲ್ಲೆಯ ಶಹಾಪುರ ಮತ್ತು ಸುರಪುರ ತಾಲ್ಲೂಕಿನಲ್ಲಿರುವ ತಾಂಡಾಗಳಿಗೆ ವಿದ್ಯುತ್ ಒದಗಿಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ.

(ಆ) ಈ ವರ್ಷವೇ ಈ ಎಲ್ಲಾ ತಾಂಡಾಗಳಿಗೆ (ಸುರಪುರ ಮತ್ತು ಶಹಾಪುರ) ವಿದ್ಯುತ್ ಒದಗಿಸಲಾಗುವುದೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

(ಅ) ಮಂಡಳಿಯು ಕ್ರಮ ಕೈಗೊಂಡಿದೆ.

(ಆ) ಇಲ್ಲ. ೧೯೮೮-೮೯ರಲ್ಲಿ ೭ ತಾಂಡಾಗಳ ವಿದ್ಯುದ್ದೀಕರಣದ ಗುರಿಯಿದೆ.

ಶ್ರೀ ಶಿವಶೆಂಖರಪ್ಪಗೌಡ ಶಿರವಾಳ.—ಮಾನ್ಯ ಅಧ್ಯಕ್ಷರೆ. ಮಾನ್ಯ ಮಂತ್ರಿಗಳು ೧೯೮೮-೮೯ರಲ್ಲಿ ಸುರಪುರ ಮತ್ತು ಶಹಾಪುರ ತಾಲ್ಲೂಕಿನಲ್ಲಿರುವ ಏಳು ತಾಂಡ-ಳಿಗೆ ವಿದ್ಯುದ್ದೀಕರಣವನ್ನು ಮಾಡುವ ಗುರಿ ಇದೆಯೆಂದು ಹೇಳಿದ್ದಾರೆ. ಆದರೆ ಸುಮಾರು ತಾಂಡಗಳು ಆ ತಾಲ್ಲೂಕುಗಳಲ್ಲಿ ಇವೆ. ಕಳೆದ ೪ ವರ್ಷಗಳಿಂದ ಹ್ಯಾಮ್‌ಲೆಟ್‌ಗಳಿಂದು ತಿಳಿದುಕೊಂಡು ಕರೆಂಟ್ ಕೊಡದೆ ಹೋದರೆ ಆಲ್ಲಿನ ಜನರಿಗೆ ಬಹಳ ಅನ್ಯಾಯವಾಗುತ್ತದೆ. ಆದ್ದರಿಂದ ಇದೇ ವರ್ಷ ಎಲ್ಲ ತಾಂಡಗಳಿಗೂ ವಿದ್ಯುತ್ ಕೊಡುವ ವ್ಯವಸ್ಥೆ ಯನ್ನು ಮಾಡುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಶಹಾಪುರ ಮತ್ತು ಸುರಪುರ ತಾಲ್ಲೂಕಿನಲ್ಲಿ ೧೩೩ ಜನ ಹರಿಜನ ಬಸತಿಗಳು ಇವೆ. ಈ ಬಸತಿಗಳಿಗೆ ಗ್ರಾಮೀಣ ವಿದ್ಯುತ್ತೀಕರಣಯೋಜನೆಗಳಲ್ಲಿ ವಿದ್ಯುತ್ ವ್ಯವಸ್ಥೆ ಮಾಡಲು, ಮಂಜೂರಾತಿ ಸಿಕ್ಕಿದೆ. ಎರಡು ವರ್ಷಗಳ ಅವಧಿಯಲ್ಲಿ ಎಲ್ಲ ತಾಂಡಗಳಿಗೂ ವಿದ್ಯುತ್ ಒದಗಿಸಲಾಗುವುದು. ೧೯೮೮-೮೯ನೇ ಇಸವಿಯ ಕೊನೆಯೊಳಗೆ ವಿದ್ಯುತ್ ಪೂರೈಸಲಾಗುವುದು.

ಶ್ರೀ ಶಿವಶೆಂಖರಪ್ಪಗೌಡ ಶಿರವಾಳ.—ಏಳು ತಾಂಡಗಳಿಗೆ ಎಂದು ಉತ್ತರ ಕೊಟ್ಟಿದ್ದೀರಿ, ೧೯೮೮-೮೯ರಲ್ಲಿ ೧೩೩ ತಾಂಡಗಳಿಗೆ ವಿದ್ಯುತ್ ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಹಂತಹಂತವಾಗಿ ವಿದ್ಯುತ್ತನ್ನು ಒದಗಿಸುವ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ. —ಏಳು ತಾಂಡಗಳಿಗೆ ಮಂಡಳಿಯು ವತಿಯಿಂದ ಮಾಡಲಾಗುವುದು. ಉಳಿದದ್ದನ್ನು ಆರ್.ಇ.ಸಿ. ಮೂಲಕ ಮಾಡಲಾಗುವುದು.

ಗಂಧದ ಎಣ್ಣೆ ತಯಾರಿಸುವ ಕಾರ್ಖಾನೆಗಳ ಬಗ್ಗೆ

೧೮೬೪. ಶ್ರೀ ಪಿ.ಎಂ. ಚಿಕ್ಕಬೋರಯ್ಯ, (ಚಾಮರಾಜ).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಶ್ರೀಗಂಧದ ಎಣ್ಣೆ ತಯಾರಿಸುವ ಕಾರ್ಖಾನೆಗಳು ಎಷ್ಟು ? ಎಲ್ಲೆಲ್ಲಿವೆ ? ಅವುಗಳ ಕಾರ್ಖಾನೆಗಳು ಬಂಡವಾಳ ಹಾಗೂ ಉತ್ಪಾದನಾ (ತೈಲ ಇತ್ಯಾದಿ) ಲಾಭದಾಯಕ ಪ್ರಮಾಣ ಗಳೆಷ್ಟು ?

(ಆ) ಮೈಸೂರು ನಗರದಲ್ಲಿರುವ ಕಾರ್ಖಾನೆಯಲ್ಲಿ ಕಾರ್ಯಸ್ಥಗಿತಗೊಳ್ಳಲು ಕಾರಣವೇನು ? ಶಿವಮೊಗ್ಗದಲ್ಲಿರುವ ಕಾರ್ಖಾನೆಗೆ ಉತ್ತೇಜನ ನೀಡಲು ಕಾರಣವೇನು ?

(ಇ) ಮೈಸೂರು ಕಾರ್ಖಾನೆ ಸ್ಥಗಿತಗೊಂಡಿರುವದರಿಂದ ಬೀದಿ ಪಾಲಾಗುತ್ತಿರುವ ೨೯೩ ಕುಟುಂಬಗಳಿಗೆ ಬದಲಿ ಉದ್ಯೋಗ ದೊರಕಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

(ಈ) ಪಾಗಿದ್ದಲ್ಲಿ ಈ ಕಾರ್ಖಾನೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ? ಆದಕ್ಕಾಗಿಂಪ ಆರ್ಥಿಕ ಅಂದಾಜು ಎಷ್ಟು ?